ಮಟ ಮಟ ಮಧ್ಯಾಹ್ನ. ಅಂಗಳದಲ್ಲಿ ಬಿಸಿಲು ಸುರಿಯುತ್ತಿದೆ. ಗಾಳಿ ಎಲ್ಲೋ ಹಾಳಾಗಿ ಹೋಗಿದೆ. ಕುದಿ ಹೆಚ್ಚುತ್ತಿದೆ. ಹಣೆಯ ಮ್ಯಾಲೆ, ಬಗಲು, ಕಂಕುಳಲ್ಲಿ ಬೆವರು ಸೆಲೆಯೊಡೆದು ಎದೆಯೊಳಗೆ ಸಂಕಟ ಮೊಟ್ಟೆ ಇಡುತ್ತಿದೆ. ಮನೆಗೆಲಸ ಮುಗಿಸಿದ್ದ ಪದ್ಮಾ ಒಲ್ಲದ ಮನಸಿನಿಂದ ಒಂದೆರಡು ರೊಟ್ಟಿ, ಬದನೆಕಾಯಿ ಪಲ್ಯೆ ತಿಂದು ಅಂಗಳದ ಬೇವಿನ ಮರದ ನೆರಳಿಗೆ ಬಂದು ಕುಳಿತಳು.

ಸೆಲೆಯೊಡೆಯತೊಡಗಿದ್ದ ಬೆವರೇನೋ ನಿಂತಿತು. ಆದರೆ, ಎದೆಯೊಳಗೆ ಮೀಟತೊಡಗಿದ್ದ ಎಂಥದೋ ಸಂಕಟ ನಿಲ್ಲುತ್ತಿಲ್ಲ. ಬಾಯೊಳಗೆ ಉಪ್ಪುಪ್ಪು ನೀರು ಬಂದಂತೆನಿಸಿತು. ತಲೆನೋವು ಶುರುವಾಯ್ತು. ತನ್ನ ಬದುಕು ಹರಿದ ಬಟ್ಟೆಯಂತಾಗಿದೆಯೆಂದು ಹಳಹಳಿಸಿದಳು. ಕಣ್ಣೊಳಗೆ ತೆಳ್ಳಗೆ ನೀರಾಡತೊಡಗಿತು. ಸೆರಗಿನಿಂದ ಒರೆಸಿಕೊಂಡಳು. ಜಲ್ಮಕ್ಕೆ ಮಾತ್ರ ತುಸುವೂ ಸಮಾಧಾನವಾಗುತ್ತಿಲ್ಲ. ನೆಲಕ್ಕೆ ಕೈಯೂರಿ ಬೇವಿನಮರ ದಿಟ್ಟಿಸಿದಳು. ಬಿರು ಬಿಸಿಲಿಗೆ ಸವಾಲೊಡ್ಡಿ ಹಚ್ಚಗೆ ಮುಗುಳ್ನಗತೊಡಗಿತ್ತು. ಮೈ ಚಾಚಿದ ಅದರ ರೆಂಬೆಕೊಂಬೆಗಳು ಆರೋಗ್ಯಪೂರ್ಣ ತರುಣಿಯನ್ನು ನೆನಪಿಸುವಂತಿದ್ದವು. ಮದುವೆಗೂ ಮುಂಚೆ ತಾನು ಅದ್ಯಾರ ಹಂಗೂ ಇಲ್ಲದೆ, ಲೋಕದ ಚಿಂತೆಗಳಿಲ್ಲದ ಈ ಮರದ ರೆಂಬೆಗಳಂತೆಯೇ ಇದ್ದೆನೆಂದು ಅಂದುಕೊಂಡಳು.

ಎಡಗೈಗೆ ಅದೇನೋ ಮೆತ್ತಗೆ ತಾಕಿತು. ನೋಡಿದರೆ ಎರಡು ಸಗಣಿ ಹುಳುಗಳು ಸಣ್ಣದೊಂದು ಸಗಣಿ ಉಂಡೆಯನ್ನು ತಮ್ಮ ದಾರದಂತಹ ತೆಳು ಕಾಲುಗಳಿಂದ ಉರುಳಿಸುತ್ತಿವೆ. ಸೋಜಿಗಗೊಂಡಳು. ಎಲ್ಲಿಗೆ ಉರುಳಿಸಿಕೊಂಡು ಹೋಗುತ್ತಿವೆ ಎನ್ನುವುದು ತಿಳಿಯಲಿಲ್ಲ ಅವಳಿಗೆ. ತುಸು ಹೊತ್ತು ಹಾಗೇ ನೋಡಿದಳು. ಆ ಸಗಣಿ ಉಂಡೆ ಒಂದಿಂಚೂ ಕದಲಿರಲಿಲ್ಲ. ಆದರೆ, ಆ ಹುಳುಗಳು ಚೈತನ್ಯದಿಂದ ಉರುಳಿಸಲು ಸೆಣಸುತ್ತಲೇ ಇದ್ದವು. ಅವುಗಳ ಸೆಣಸಾಟದಂತೆಯೇ ಈ ಸಂಸಾರದಲ್ಲಿ ತಾನೂ ಸೆಣಸುತ್ತಿದ್ದೇನೆ. ಆದರೆ, ಅವುಗಳ ಚೈತನ್ಯ ತನ್ನಲ್ಲಿಲ್ಲ. ಆ ಹುಳುಗಳ ಜಾಗ ಗೊತ್ತಿದ್ದರೆ ಹುಳುಗಳ ಸಮೇತ ಆ ಸಗಣಿ ಉಂಡೆಯನ್ನು ಎತ್ತಿಟ್ಟು ಬರಬೇಕೆನಿಸಿತವಳಿಗೆ. ಅವಳ ತಲೆ ಮ್ಯಾಲೆ ಗುಬ್ಬಿಯೊಂದು ಹಿಕ್ಕೆ ಹಾಕಿತು. ಒರೆಸಿಕೊಳ್ಳುತ್ತ ಮರದ ಮ್ಯಾಲೆ ಹುಡುಕಿದಳು. ಅದು ಕಾಣದಂತೆ ಪುರ್ರನೆ ಹಾರಿ ಹೋಗಿತ್ತು. ಮರ ದಿಟ್ಟಿಸುತ್ತಲೇ ಬೇವಿನ ಕಾಯಿಗಳ ಗೊಂಚಲು ಮನ ಸೆಳೆದವು. ಆ ಮರದ ಫಲವಂತಿಕೆ ಅವಳಲ್ಲಿ ಅಸೂಯೆ ಹುಟ್ಟಿಸಿತು. ಎಷ್ಟೊಂದು ಕಾಯಿಗಳು. ತನಗೆ ಒಂದೇ ಒಂದು ಮಗುವಾಗಿದ್ದರೆ ಈ ನಾಯಿ ಪಾಡು ಬರುತ್ತಿರಲಿಲ್ಲವೆಂದು ಒಳಗೊಳಗೆ ದುಃಖಿಸತೊಡಗಿದಳು. ಈ ಬಾಳ್ವೆಯೇ ಸಾಕೆನಿಸತೊಡಗಿ ಕಣ್ಣಂಚು ಒದ್ದೆಯಾದವು.

★★★

ಒಬ್ಬಳೇ ಮಗಳಾದ ಪದ್ಮಾ ರಮೇಶಪ್ಪ, ಜಯಮ್ಮನ ಮುದ್ದಿನ ಮಗಳು. ಇವರು ಬೇರೆಯವರ ಹೊಲದಲ್ಲಿ ಕೂಲಿ ದುಡಿಯುತ್ತಿದ್ದರೂ ಪದ್ಮಾಳನ್ನು ಯಾವತ್ತೂ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗಿರಲಿಲ್ಲ. ಪದ್ಮಾ ನೀಟಾಗಿ ಮನೆಗೆಲಸ, ಅಡಿಗೆ ಮಾಡಿ ಅಪ್ಪಅವ್ವನನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದಳು.